**ಎಸ್.ಸಿ.ಸಂಖ್ಯೆಃ10047/2025**

**ಪ್ರಾ.ಸಾ.ಸಂಖ್ಯೆಃ 15**

**ಚಾ.ಸಾ.ಸಂಖ್ಯೆಃ 11**

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಸದಾಶಿವ ಬಡಗಂಡಿ |
| ತಾಯಿಯ ಹೆಸರುಃ | ಮರಗವ್ವ |
| ವಯಸ್ಸುಃ | **36** ವರ್ಷ |
| ಉದ್ಯೋಗಃ | ಕೂಲಿ |
| ವಾಸಃ | ಮುಧೋಳ. |

**ಸಾಕ್ಷಿಯನ್ನು ದಿಃ 12.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

**1.** ನನಗೆ ಚಾಸಾ-**1** ಹಾಗೂ ಆರೋಪಿತರ ಪರಿಚಯವಿದೆ. ಸುಮಾರು **5-6** ವರ್ಷಗಳ ಹಿಂದೆ ನಾನು ಮುತ್ತು ಎನ್ನುವ ವ್ಯಕ್ತಿಯಿಂದ **50** ಸಾವಿರ ರೂಪಾಯಿ ಸಾಲ ಪಡೆದಿದ್ದೆ. ಸದರಿ ಮುತ್ತು ಚಾಸಾ-**1** ಇವರಿಗೆ ಹಣ ಕೊಡಿಸಬೇಕೆಂದು ಕೇಳಿದ್ದ. ಚಾಸಾ-**1** ನನಗೆ ಹಣ ಕೊಡಲು ಹೇಳಿದ. ನಾನು ಸಮಯವನ್ನು ಕೋರಿದ್ದೆ. ನಾನು ಈ ವಿಷಯವನ್ನು ಆರೋಪಿ ಕಾಳಪ್ಪ ಈತನಿಗೂ ಹೇಳಿದ್ದೆ. ಆ ಬಗ್ಗೆ **2** ನೇ ಆರೋಪಿ ಹಾಗೂ ಚಾಸಾ-**1** ಇವರ ನಡುವೆ ಜಗಳವಾಗಿತ್ತು. ನಾನು ಹಣ ಕೊಡುತ್ತೇನೆ ಅಂತ ಹಿರಿಯರ ಮುಂದೆ ಹೇಳಿದ್ದೆ.

**2.** ಮಧ್ಯಾಹ್ನ **1-30** ಗಂಟೆ ಸುಮಾರಿಗೆ ಚಾಸಾ-**1** ನನಗೆ ಬೇಟಿಯಾಗಿ ಆರೋಪಿತರು ತನಗೆ ಹಾಗೂ ತನ್ನ ತಾಯಿಗೆ ಮನೆಗೆ ಬಂದು ತಮಗೆ ಬೈದು, ಹೊಡಿಬಡಿ ಮಾಡಿರುತ್ತಾರೆ ಅಂತ ಹೇಳಿದನು. ನಾನು ಆ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟಿಸವಾಲು: ಆರೋಪಿ ಪರ ವಕೀಲರಿಂದ:**

**(ವಕೀಲರ ವಿನಂತಿ ಮೇರೆಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು. )**

**ಎಸ್.ಸಿ.ಸಂಖ್ಯೆಃ 10047/2025**

**ಪ್ರಾ.ಸಾ.ಸಂಖ್ಯೆಃ 15**

**ಚಾ.ಸಾ.ಸಂಖ್ಯೆಃ 11**

**(ಸಾಕ್ಷಿದಾರರನ್ನು ಪುನ: ಮಧ್ಯಾಹ್ನದ ಅವಧಿಯಲ್ಲಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟಿಸವಾಲು: ಆರೋಪಿ ಪರ ವಕೀಲರಿಂದ:**

**(ಸಾಕ್ಷಿದಾರರನ್ನು ಪುನ: ಮಧ್ಯಾಹ್ನದ ಅವಧಿಯಲ್ಲಿ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟಿಸವಾಲು: ಆರೋಪಿ ಪರ ವಕೀಲರಿಂದ:**

**1.** ನಾನು ಮುತ್ತು ಇವರಿಂದ ಸುಮಾರು ಐದುವರೆ ವರ್ಷಗಳ ಹಿಂದೆ **50** ಸಾವಿರ ರೂಪಾಯಿ ಸಾಲ ಪಡೆದಿದ್ದೆ. ನಾನು ಹನಮಂತ ಮೇತ್ರಿ ಇವರ ಕಡೆಯಿಂದ **50** ಸಾವಿರ ರೂಪಾಯಿ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಾನು ಚಾಸಾ-**1** ಇವರಿಗೆ ನನ್ನ ಸಾಲದ ವ್ಯವಹಾರದ ಬಗ್ಗೆ ಯಾವ ನಿರ್ದಿಷ್ಟ ದಿವಸ ಹೇಳಿದ್ದೆ ಅಂತ ಹೇಳಲು ಬರುವುದಿಲ್ಲ. ಆಗ ಸಾಯಂಕಾಲ ಆಗಿತ್ತು.

**2.** ಚಾಸಾ-**1** ಆ ದಿವಸ **2**ನೇ ಆರೋಪಿಯ ಗಲ್ಲಕ್ಕೆ ಹಲ್ಲೆ ಮಾಡಿದ್ದ, ಆ ಕಾರಣ **2**ನೇ ಆರೋಪಿ ಕುಬಸದ ಆಸ್ಪತ್ರೆಯಲ್ಲಿ ದಾಖಲಾಗಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-**1** ಓಣಿಯವರು ಇರುತ್ತೇವೆ. ಸ್ನೇಹಿತರು ಎಂದರೆ ಸರಿಯಲ್ಲ. ಆರೋಪಿ ನಂ. **2** ದೂರು ಕೊಡುತ್ತಾನೆಂಬ ಕಾರಣದಿಂದ ಚಾಸಾ-**1** ಸುಳ್ಳು ದೂರು ನೀಡಿದ್ದಾರೆಂದರೆ ಸರಿಯಲ್ಲ. ಚಾಸಾ-**1** ನನಗೆ ಆ ದಿವಸ ಮಧ್ಯಾಹ್ನ **1-30** ಕ್ಕೆ ಭೇಟಿಯಾಗಿ ಘಟನೆ ಬಗ್ಗೆ ಹೇಳಿದ್ದ ಅಂತ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

**3.** ಘಟನೆಯ ದಿವಸ ಚಾಸಾ-**1** ನನಗೆ ಮಧ್ಯಾಹ್ನ **1-30** ಗಂಟೆಗೆ ಬಸ್ಟ್ಯಾಂಡ ಹಿಂದಿನ ನಮ್ಮ ಓಣಿಯಲ್ಲಿ ಭೇಟಿಯಾಗಿದ್ದ. ಆಗ ಚಾಸಾ-**1** ಇವರ ಕುತ್ತಿಗೆಯ ಬಲಭಾಗದಲ್ಲಿ ತರೆದ ಗಾಯ ಆಗಿತ್ತು. ಆಗ ನಾನು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಿಲ್ಲ. ಏಕೆಂದರೆ ಆಗ ಚಾಸಾ-**9** ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೊರಟಿದ್ದ. ನಾನು

**ಎಸ್.ಸಿ.ಸಂಖ್ಯೆಃ 10047/2025**

**ಪ್ರಾ.ಸಾ.ಸಂಖ್ಯೆಃ 15**

**ಚಾ.ಸಾ.ಸಂಖ್ಯೆಃ 11**

ಆಸ್ಪತ್ರೆಗೆ ಹೋಗಿಲ್ಲ. ನಾನು ಪೊಲೀಸ್ ಹೊರಠಾಣೆಗೆ ಈ ಬಗ್ಗೆ ಮಾಹಿತಿ ತಿಳಿಸಿಲ್ಲ.

**4.** ನಾನು ಬಿ.ಜೆ.ಪಿ. ಕಾರ್ಯಕರ್ತ ಎಂದರೆ ಸರಿ. ನಾನು ಶೇಖರ ಹಾಗೂ ಚಾಸಾ-**9** ಬಿ.ಜಿ.ಪಿ. ಕಾರ್ಯಕರ್ತರು ಎಂದರೆ ಸರಿ. ನಾನು ಚಾಸಾ-**1** ಹಾಗೂ **9** ಇವರ ಮಾತು ಕೇಳಿ ಚಾಸಾ-**1** ಭೇಟಿಯಾಗಿದ್ದ ಅಂತ, ಘಟನೆ ಬಗ್ಗೆ ತಿಳಿಸಿದ ಅಂತ ಹಾಗೂ ಗಾಯ ಹೊಂದಿದ್ದ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**